ಸಂವಿಧಾನ ಸಾಕ್ಷಿ

ಮದುವೆ ಆಮಂತ್ರಣ

ವಿವಾಹ ದಿನಾಂಕ :
26-11-2026
ಗುರುವಾರ
ಬೆಳಿಗ್ಗೆ 11.00 ಗಂಟೆಗೆ

ವಿವಾಹ ಸ್ಥಳ :
ಶ್ರೀ ಲಕ್ಷ್ಮೀ ಪ್ಯಾಲೇಸ್
ಓಜನಹಳ್ಳಿ ರಸ್ತೆ, ಭಾಗ್ಯನಗರ
ತಾ॥ ಜಿ॥ ಕೊಪ್ಪಳ

ಇವರಿಗೆ,

_____

_____

ತಮ್ಮ ಬರುವೆಮಗೆ ಪ್ರಾಣಜೀವಾಳ

_____

ಇವರಿಂದ

ಡಾ. ಪಾರ್ವತಿ ಕನಕಗಿರಿ
ಉಪನ್ಯಾಸಕರು, ಕೊಪ್ಪಳ ವಿಶ್ವವಿದ್ಯಾಲಯ

ಡಾ. ಪ್ರವೀಣ ಪೋಲಿಸ ಪಾಟೀಲ
ಉಪನ್ಯಾಸಕರು, ಕೊಪ್ಪಳ ವಿಶ್ವವಿದ್ಯಾಲಯ

ಮೊ: 9483352863, 9738405181

ವಿಳಾಸಕ್ಕಾಗಿ
ಸ್ಕ್ಯಾನ್ ಮಾಡಿ

"ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ.."
– ಕನಕದಾಸರು

"ಮನುಷ್ಯ ಜಾತಿ ತಾನೊಂದೆ ವಲಂ"

"ಶಾಂತಿಗೆ ಬುದ್ಧ, ಕಾಯಕಕ್ಕೆ ಬಸವ, ಜ್ಞಾನಕ್ಕೆ ಅಂಬೇಡ್ಕರರು ಸಾಕ್ಷಿಪ್ರಜ್ಞೆಯಾಗಿ"

"ಹೊಸ ಬದುಕಿನ ಯಾನದಲಿ, ಅಂತರಂಗದ ದೀವಿಗೆಯಾಗಿ"

ಡಾ. ಪಾರ್ವತಿ ಕನಕಗಿರಿ

(ಶ್ರೀಮತಿ ಸತ್ಯಮ್ಮ ಗಂ ಶ್ರೀ ಕಂಠಿಪ್ಪ ಚಲುವಾದಿ ಸಾ|ಕನಕಗಿರಿ ತಾ|ಕನಕಗಿರಿ ಜಿ| ಕೊಪ್ಪಳ ಇವರ ಏಕೈಕ ಸುಪುತ್ರಿ)



ಡಾ. ಪ್ರವೀಣ ಪೋಲಿಸ ಪಾಟೀಲ

(ಶ್ರೀಮತಿ ಬಸಮ್ಮ ಗಂ ಶ್ರೀ ಬಸನಗೌಡ ಪೋಲಿಸ ಪಾಟೀಲ ಸಾ| ತರಲಕಟ್ಟೆ ತಾ| ಯಲಬುರ್ಗಾ ಜಿ|ಕೊಪ್ಪಳ ಇವರ ದ್ವಿತೀಯ ಸುಪುತ್ರ)

ಮನಸುಗಳ ಮಿಲನದಿಂದ

ಸಂವಿಧಾನ ಸಾಕ್ಷಿ ಬಾಳ ಸಾಂಗತ್ಯಕ್ಕೆ

॥ ದಿನಾಂಕ: ೨೬ನೇ ನವಂಬರ, ೨೦೨೬ರ ಗುರುವಾರ, ಬೆಳಿಗ್ಗೆ ೧೧:೦೦ ಗಂಟೆಗೆ ॥

ಕೊಪ್ಪಳ ತಾಲೂಕಿನ ಭಾಗ್ಯನಗರದ ಓಜನಹಳ್ಳಿ ರಸ್ತೆಯಲ್ಲಿರುವ

ಲಕ್ಷ್ಮೀ ಪ್ಯಾಲೆಸ್ನಲ್ಲಿ ಅಡಿ ಇಡುತ್ತಿದ್ದೇವೆ.

ನಮ್ಮಿಬ್ಬರ ಈ ಸಂಭ್ರಮವನ್ನು ಸಾಕ್ಷೀಕರಿಸಲು, ತಮ್ಮ ಬರುವಿಗೆ ಪ್ರಾಣಜೀವಾಳವೆಂದು ಭಾವಿಸಿ, ಈ ಮೂಲಕ ತಮ್ಮನ್ನು ಪ್ರೀತಿಯಿಂದ ಆಹ್ವಾನಿಸುತ್ತಿದ್ದೇವೆ.

ತಮ್ಮ ಆಗಮನದ ನಿರೀಕ್ಷೆಯಲ್ಲಿ

ಡಾ. ಪ್ರವೀಣ ಪೋಲಿಸ ಪಾಟೀಲ,
ಉಪನ್ಯಾಸಕರು,
ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ

ಡಾ. ಪಾರ್ವತಿ ಕನಕಗಿರಿ,
ಉಪನ್ಯಾಸಕರು,
ಕೊಪ್ಪಳ ವಿಶ್ವವಿದ್ಯಾಲಯ, ಕೊಪ್ಪಳ

ಉಪಸ್ಥಿತಿ

ಸಾಹಿತಿಗಳು ಹಾಗೂ ಸಾಂಸ್ಕೃತಿಕ ಮನಸ್ಸುಗಳು, ಗೆಳೆಯರು ಮತ್ತು ಕುಟುಂಬ ವರ್ಗ

ಏನಾದರೂ ಆಗು ಮೊದಲು ಮಾನವನಾಗು

ಮನಸುಗಳ ಮಿಲನ

ಹೊತ್ತಿಲ್ಲದೊತ್ತಿನಲಿ ಪಿಸುಗುಡುವ ಮನಸೆ
ನಿನಗೇಕೆ ನನ್ನ ಮೇಲೆ ಹುಸಿ ಮುನಿಸು
ಜಾತಿ ಇಲ್ಲದ ಪ್ರೀತಿ ನಮ್ಮದು ಮತ್ತೇಕೆ ಭೀತಿ
ನಕ್ಕುಬಿಡು ಒಮ್ಮೆ ಮೌನ ನಾಚಿ ಓಡುವಂತೆ

ಗಿರಿಯಿಂದ ಧರೆಗಿಳಿದು ಬಂದು
ಆಗು ಬಾ ಈ ಹರನ ಅರ್ಧಾಂಗಿ
ಹರಿಜನ ಗಿರಿಜನ ಬಿಳಿಜನ ಬೇಡ ನಮ್ಮಿಬ್ಬರಲಿ ಕದನ
ಮನಸು ಮನಸುಗಳ ಮಧ್ಯೆ ಪ್ರೇಮದ ಸೇತುವೆ ಕಟ್ಟಿ
ಜಾತಿ ವಿರೋಧದ ಜಾತ್ರೆ ಮಾಡೋಣ

ಬುದ್ಧ ನಿನ್ನ ಮನದಲ್ಲಿ ಬಸವ ನನ್ನ ಮನದಲ್ಲಿ
ಹಾಗಾದರೆ ಅಂಬೇಡ್ಕರ್ ಎಲ್ಲಿ...?
ಇರಲಿ ನಮ್ಮ ಮನೆಯಲ್ಲಿ
ಕೊಚ್ಚಿ ಹೋಗಲಿ ಜಾತಿ ಕೊಚ್ಚೆ ಗುಂಡಿಗಳಲ್ಲಿ
ಹಚ್ಚು ಬಾ ಜ್ಯೋತಿ ನಮ್ಮ ಮನೆ ಮನೆಗಳಲ್ಲಿ
ಸುಟ್ಟು ಕರಕಲಾಗಲಿ ಜಾತಿ ಎಲ್ಲರ ಮನ ಮನಗಳಲ್ಲಿ
ಗೆಳತಿ ಬಾ ಜಾತಿ ವಿರೋಧದ ಜಾತ್ರೆ ಮಾಡೋಣ

ಡಾ. ಪ್ರವೀಣ ಪೋಲಸ ಪಾಟೀಲ

ಎಡಬಲಗಳ ಮಧ್ಯೆ
ಕಟ್ಟಿ ಕೆಡಹುವುದರೊಳಗೆ
ಕಟ್ಟಿಕೊಂಡೆವು ನಾವು
ಯುದ್ಧವಿಲ್ಲದ ಬುದ್ಧನನ್ನು
ಸೇರಿಕೊಂಡೆವು ನಾವು
ಸಮಾನತೆಯ ಬಸವನನ್ನು
ಒಪ್ಪಿ ಅಪ್ಪಿಕೊಂಡೆವು
ದೂರವಿಟ್ಟ ಭೀಮನನ್ನು.

ಡಾ. ಪಾರ್ವತಿ ಕನಕಗಿರಿ